ದ.ರಾ. ಬೇಂದ್ರೆ, ವಿ.ಕೃ. ಗೋಕಾಕ, ರಂ.ಶಿ. ಮುಗಳಿ ಸೇರಿಕೊಂಡರು. ಬೆಟಗೇರಿ ಕೃಷ್ಣಶರ್ಮರ 'ಸುದರ್ಶನ' ಕಾದಂಬರಿ ಮೂಲಕ 'ಮನೋಹರ ಗ್ರಂಥಮಾಲಾ' ಪುಸ್ತಕ ಪ್ರಕಟಣೆಯನ್ನು ಆರಂಭಿಸಿತು. ಅಲ್ಲಿಂದ ವರ್ಷಕ್ಕೆ ಒಂದೋ ಅಥವಾ ಎರಡೋ ಕಾದಂಬರಿಗಳನ್ನು ಸಿದ್ಧಪಡಿಸಿ ಪ್ರಕಟಿಸಲಾಗುತ್ತಿತ್ತು. ಆದರೆ ಇದರಿಂದ ಬರುವ ಹಣ ಜೀವನೋಪಾಯಕ್ಕೆ ಸಾಕಾಗದ ಕಾರಣ ಮೂವರೂ ಪ್ರತ್ಯೇಕವಾಗಿ ಏನಾದರೂ ಮಾಡಲು ನಿರ್ಧರಿಸಿದರು. ಆಗ ಗ್ರಂಥಮಾಲೆಯನ್ನು ಜಿ.ಬಿ. ಜೋಶಿ ಒಬ್ಬರೇ ನಿರ್ವಹಿಸತೊಡಗಿದರು.

ದೇಶದ ಇತಿಹಾಸದಲ್ಲೇ ಚಂದಾದಾರರಿಂದ ನಡೆಯುತ್ತಿರುವ ಏಕೈಕ ಪುಸ್ತಕ ಮಳಿಗೆ ಎಂದರೆ ಅದು 'ಮನೋಹರ ಗ್ರಂಥಮಾಲಾ' ಎಂದರೆ ಅತಿಶಯೋಕ್ತಿ ಆಗಲಾರದು. ಈಗ ಇಲ್ಲಿ ಸುಮಾರು ಒಂದು ಸಾವಿರದಷ್ಟು ಚಂದಾದಾರರು ಇದ್ದಾರೆ. ಜೋಶಿ ಅವರು ಮನೆಮನೆಗೆ ಹೋಗಿ ಜನರನ್ನು ಓದಲು ಪ್ರೇರೇಪಿಸುತ್ತಿದ್ದರು, ಚಂದಾದಾರನ್ನಾಗಿ ಮಾಡುತ್ತಿದ್ದರು.

ಕರ್ನಾಟಕ ಏಕೀಕರಣಕ್ಕೂ ಗ್ರಂಥಮಾಲಾ ಪರೋಕ್ಷ ಕೊಡುಗೆ ಅಪಾರ. ನವ್ಯ ಸಾಹಿತ್ಯಕ್ಕೂ ನೀಡಿದ ಪ್ರೋತ್ಸಾಹ ಅನನ್ಯ. ಸಂಪ್ರದಾಯ ಕುಟುಂಬದಿಂದ ಬಂದ ಜೋಶಿ ಅವರಿಗೆ ಆ ಕಾಲದಲ್ಲಿ ಸಾಕಷ್ಟು ವಿರೋಧವಿದ್ದರೂ, ನವ್ಯ ಸಾಹಿತ್ಯಕ್ಕೆ ಸರಕುಗಳನ್ನು ಸಂಪಾದಿಸಿದರು. 'ಖೋ' ಎಂಬ ಕಾದಂಬರಿಗೆ 11 ಲೇಖಕರನ್ನು ಹುಡುಕಿ ಬರೆಯಿಸಿದ್ದರು. ಜತೆಗೆ 'ಮನ್ವಂತರ' ಎಂಬ ನಿಯತಕಾಲಿಕೆ ಹೊರತಂದರು. ಹಿಂದೂಸ್ತಾನಿ ಗಾಯಕ ಭೀಮಸೇನ ಜೋಶಿ ಅವರನ್ನು ಕರೆತಂದು ನಾಟಗಳನ್ನು ಮಾಡಿಸಿದರು. ಈಗಲೂ ಇಲ್ಲಿ ಅಂದಿನಂತೆ ಅನೇಕ ಹಿರಿಯ ಹಾಗೂ ಕಿರಿಯ ಸಾಹಿತಿಗಳು ಸೇರಿ ಸಾಹಿತ್ಯ ಚರ್ಚೆಯಲ್ಲಿ ತೊಡಗುತ್ತಾರೆ. ಮಹಡಿ ಮೇಲಿರುವ ಈ ಕೇಂದ್ರ ಅಂದಿನಿಂದಲೂ 'ಅಟ್ಟ' ಎಂದೇ ಪ್ರಸಿದ್ಧಿ.

ಜಿ.ಬಿ.ಜೋಶಿ ಅವರ ಮಗ ರಮಾಕಾಂತ ಜೋಶಿ ಅವರು ಮುಂದೆ ಅದನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಬಂದಿದ್ದಾರೆ. ಈಗ ಅವರ ಮಗ ಸಮೀರ ಜೋಶಿ ಆಧುನಿಕ ತಂತ್ರಜ್ಞಾನ ಅಳವಡಿಸಿ ಇನ್ನಷ್ಟು ಪ್ರಸಿದ್ಧಗೆ ಕಾರಣರಾಗಿದ್ದಾರೆ. 'ಧಾರವಾಡದ ಸುಭಾಸ ರಸ್ತೆಯಲ್ಲಿರುವ ಮನೋಹರ ಗ್ರಂಥಮಾಲಾ ನನ್ನ ಪಾಲಿಕೆ ಮುಕ್ತ ವಿಶ್ವವಿದ್ಯಾಲಯ' ಎಂದು ಗಿರೀಶ ಕಾರ್ನಾಡರು ಹೇಳುತ್ತಾರೆ. ಇದು ನನ್ನ ಪಾಲಿಗೂ ವಿಶ್ವವಿದ್ಯಾಲಯ.



## ಶಾಲ್ಮಲಾ... ಶಾಲ್ಮಲಾ...

■ ಪಿ.ವಿ. ಹಿರೇಮಠ

ಇಲ್ಲಿನ ಪುರಾಣ ಪ್ರಸಿದ್ಧ ಸೋಮೇಶ್ವರ ದೇವಾಲಯದ ಆವರಣದಲ್ಲಿ ಹುಟ್ಟಿ, ಗುಪ್ತಗಾಮಿನಿಯಾಗಿ ಹರಿದು, ಮುಂದೆ ಬೇಡ್ತಿ ನದಿಗೆ ಸೇರುವ ಶಾಲ್ಮಲಾ ಅತ್ಯಂತ ಪವಿತ್ರವಾದ ನದಿಯಾಗಿದೆ.

ಮುಗದದಲ್ಲಿ ಹುಟ್ಟುವ ಬೇಡ್ತಿ ಮತ್ತು ಶಾಲ್ಮಲಾ ನದಿ ಕಲಘಟಗಿ ಬಳಿ ಸೇರುತ್ತವೆ. ಅಲ್ಲಿಂದ ಮುಂದೆ ಬೇಡ್ತಿಯಾಗಿ ಪಶ್ಚಿಮಾಭಿಮುಖವಾಗಿ 25 ಕಿ.ಮೀ. ಹರಿದು ಉತ್ತರ ಕನ್ನಡ ಜಿಲ್ಲೆಯನ್ನು ಪ್ರವೇಶಿಸುತ್ತದೆ. ನಂತರ ಆಗ್ನೇಯ ದಿಕ್ಕಿನಲ್ಲಿ 32 ಕಿ.ಮೀ. ಹರಿದು, ಧುಮುಕಿ ಮತ್ತೆ 32 ಕಿ.ಮೀ. ದೂರ ಕ್ರಮಿಸಿ ಸಮುದ್ರ ಸೇರುತ್ತದೆ.

ಧಾರವಾಡದಲ್ಲಿ ಹುಟ್ಟುವ ಈ ನದಿ ಸಮುದ್ರ ಸೇರುವ ಮಾರ್ಗದಲ್ಲಿ 161 ಕಿ.ಮೀ. ದೂರ ಕ್ರಮಿಸುತ್ತದೆ. ಈ ಮಾರ್ಗದಲ್ಲಿ ಸಾಕಷ್ಟು ತೊರೆಗಳು ಈ ನದಿಯನ್ನು ಸೇರುತ್ತವೆ. ಸಹ್ಯಾದ್ರಿಯ ಪಶ್ಚಿಮ ಭಾಗದಲ್ಲಿ ಹರಿಯುವ ಈ ನದಿಯೇ ಮುಂದೆ ಮಾಗೋಡು ಜಲಪಾತವಾಗಿ ಜನಮನ ಸೆಳೆಯುತ್ತದೆ.

ಸೋಂದಾ ನದಿ ಕೂಡಾ ಉತ್ತರ ಕನ್ನಡದ ಹಿರೇಗದ್ದೆ ಬಳಿ ಸೇರಿ ನಂತರ ಸುಮಾರು 24 ಕಿ.ಮೀ. ಕ್ರಮಿಸುತ್ತದೆ. ಸೋಮೇಶ್ವರ ದೇವಾಲಯದ ಐತಿಹಾಸಿಕ ಕಲ್ಲಿನ ದೇವಾಲಯದ ಮುಂಭಾಗದಲ್ಲಿರುವ ಪುಷ್ಕರಣಿಯೇ ಈ ಶಾಲ್ಮಲೆಯ ಉಗಮ ಸ್ಥಾನ. ಸಾಕಷ್ಟು ಪ್ರವಾಸಿಗರು ಪ್ರತಿ ವರ್ಷ ಬಂದು ಪ್ರಶಾಂತವಾದ ವಾತಾವರಣದಲ್ಲಿರುವ ಇಲ್ಲಿಗೆ ಭೇಟಿ ನೀಡಿ ಧನ್ಯರಾಗುತ್ತಾರೆ.

## ಏಕೀಕರಣದ ಮುನ್ನುಡಿ 'ವಿದ್ಯಾವರ್ಧಕ ಸಂಘ'

■ ಹೇಮಾ ಪಟ್ಟಣಶೆಟ್ಟಿ

ಮುಂಬೈ ಕರ್ನಾಟಕದಲ್ಲಿ ಮರಾಠಿ, ನಿಜಾಮ ಕರ್ನಾಟಕದಲ್ಲಿ ಉರ್ದು, ತೆಲುಗು–ಮದ್ರಾಸ್ ಕರ್ನಾಟಕದಲ್ಲಿ ತಮಿಳು ಭಾಷೆಗಳ ಪ್ರಾಬಲ್ಯ ಇದ್ದ ಕಾಲದಲ್ಲಿ ಕನ್ನಡ ಕಡೆಗಣನೆಗೊಳಗಾಗಿತ್ತು. ಇಂಥ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡದ ಪುನರುಜ್ಜೀವನಕ್ಕೆ ಅಹೋರಾತ್ರಿ ದುಡಿಯಿತು. ನಾಡು, ನುಡಿಗಳ ಸೇವೆಯನ್ನೇ ಉದ್ದೇಶವಾಗಿಟ್ಟುಕೊಂಡು ರಾ.ಹ. ದೇಶಪಾಂಡೆ ಅವರು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು 20ನೇ ಜುಲೈ 1890ರಲ್ಲಿ ಪ್ರಾರಂಭಿಸಿದರು.

ಅಖಿಲ ಕರ್ನಾಟಕ ವ್ಯಾಪ್ತಿಯುಳ್ಳ ಸಂಸ್ಥೆಗಳಲ್ಲಿ ಮೊದಲನೆಯದು ಎಂದೆನಿಸಿಕೊಂಡಿರುವ ಈ ಸಾಂಸ್ಕೃತಿಕ ಸಂಸ್ಥೆಯ ಪ್ರಥಮ ಅಧ್ಯಕ್ಷ ಶಾಮರಾವ್ ಕೈಕಿಣಿ. ಆ ಸಂದರ್ಭದಲ್ಲಿ ಕಾರ್ಯದರ್ಶಿಯಾಗಿದ್ದವರು ರಾ.ಹ. ದೇಶಪಾಂಡೆ. ಸಂಘದ ಸ್ಥಾಪನೆ ಮತ್ತು ಹೋರಾಟದಿಂದಾಗಿ ಕನ್ನಡ ಭಾಗಗಳಲ್ಲಿನ ಶಾಲೆಗಳಲ್ಲಿ ಕಲಿಸುತ್ತಿದ್ದ ಮರಾಠಿ ವ್ಯವಸ್ಥಿತವಾಗಿ ಕೊನೆಗೊಂಡಿತು.

ಅಂದಿನ ಮುಂಬಯಿ, ಮದ್ರಾಸ್, ಪುಣೆ, ಅಹಮ್ಮದನಗರ, ಹೈದ್ರಾಬಾದ್, ಕಾರವಾರ, ಮಂಗಳೂರು, ಮೈಸೂರು, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಮಡಿಕೇರಿ ಇತ್ಯಾದಿ ಕರ್ನಾಟಕದ ಒಳ ಹೊರಗಿನ ಪಟ್ಟಣಗಳ ಕನ್ನಡಿಗರು, ಕನ್ನಡಾಭಿಮಾನಿಗಳು ಇದರ ಆಜೀವ ಸದಸ್ಯರಾಗಿ ಅಂದಿಗೆ ಈ ಸಂಸ್ಥೆಯನ್ನು ಇಡೀ ಕರ್ನಾಟಕದ ಪ್ರಾತಿನಿಧಿಕ ಸಂಸ್ಥೆಯನ್ನಾಗಿ ಮಾಡಿದರು. ಇದರ ಸದಸ್ಯರ ಪಟ್ಟಿಯಲ್ಲಿ ಸಿ.ಸಿ. ಹುಲಕೋಟಿ, ಬಿ.ಎಲ್. ರೈಸ್, ಕಿಟ್ಟೆಲ್, ಫ್ಲೀಟ್, ಭಂಡಾರಕರ, ಬಿ.ಎಂ.ಶ್ರೀ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಎಸ್.ಸಿ. ನಂದೀಮಠ. ಟಿ.ಕೆ. ತುಕೋಳ್, ಕೆ.ಜಿ. ಕುಂದಣಗಾರ, ಎ.ಆರ್. ಕೃಷ್ಣಶಾಸ್ತ್ರಿ, ಎಂ.ಎಚ್. ಕೃಷ್ಣ, ಕಡೆಂಗೋಡ್ಲು ಶಂಕರಭಟ್ಟ, ಮಧುರಚೆನ್ನ, ಬಿ. ವೆಂಕಟಾಚಾರ್ಯ ಅವರಂಥ ದಿಗ್ಗಜರಿದ್ದಾರೆ.

ಮೈಸೂರು ಅರಸರು ಹಾಗೂ ವಂಟಮುರಿ ಸಿರಸಿಂಗಿ ದೇಸಾಯಿ ಅವರು ಸಂಘದ ಬೆಳವಣಿಗೆಗೆ ಸಹಕರಿಸಿದರು. ಸಂಘ ಹುಟ್ಟಿದ ನಂತರ ಬೆಂಗಳೂರಿನಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಆರಂಭಗೊಂಡಿತು. ಸ್ವಾತಂತ್ರ್ಯ ನಂತರದಲ್ಲಿ ಕರ್ನಾಟಕದ ಏಕೀಕರಣ ಚಳವಳಿಯಲ್ಲಿ ಸಂಘದ ಪಾತ್ರ ಮಹತ್ವದ್ದು. ಕನ್ನಡ ಭಾಷಾನೀತಿಗೆ ಸಂಬಂಧಿಸಿದಂತೆ ಗೋಕಾಕ ಚಳವಳಿ ಸಂಘದ ಆವರಣದಿಂದಲೇ ಆರಂಭಗೊಂಡು ಯಶಸ್ವಿಗೊಂಡಿತು. ಹೀಗೆ ಕಾಲಕಾಲಕ್ಕೆ ಕನ್ನಡದ ನಾಡು, ನುಡಿಗೆ ಧಕ್ಕೆ ಬಂದಾಗ ಅದರ ವಿರುದ್ಧ ದನಿ ಎತ್ತಿ ನಾಡನ್ನು ಜಾಗೃತಗೊಳಿಸಿದೆ.

